Office of the Principal Director ,
Karnataka State Audit and Accounts Department,
3rd floor 'A' Block , T T M C Building,
K.H. Road, Shanthinagar,
Bengaluru-560 027.
Phone No:- 080- 22214817
Fax No.:- 080- 22216500
**Email: ksaadtraining@gmail.com**
**Website: www.ksaad.karnataka.gov.in**

ಪ್ರಧಾನ ನಿರ್ದೇಶಕರ ಕಚೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, 3ನೇ ಮಹಡಿ, 'ಎ' ಬ್ಲಾಕ್, ಟಿಟಿಎಂಸಿ ಕಟ್ಟಡ,
ಕೆ ಹೆಚ್ ರೋಡ್, ಶಾಂತಿನಗರ,
ಬೆಂಗಳೂರು-560 027.
ದೂರವಾಣಿ ಸಂಖ್ಯೆ:- 080- 22214817
ಫ್ಯಾಕ್ಸ್ ಸಂಖ್ಯೆ:- 080- 22216500
ಇ-ಮೇಲ್: : **ksaadtraining@gmail.com**
**Website: www.ksaad.karnataka.gov.in**

ಸಂಖ್ಯೆ: ಕರಾಲೆ&ಲೆಪ/ತರಬೇತಿ-05/2021-22 | 1190 ದಿನಾಂಕ: 16-12-2021

::ಸುತ್ತೋಲೆ::

ವಿಷಯ: ನಿಗದಿ ಪಡಿಸಿರುವ ತರಬೇತಿಗಳನ್ನು ಪಡೆಯದೆ ಇರುವ ಗ್ರೂಪ್ 'ಸಿ' ಸಿಬ್ಬಂದಿಗಳ ವಿವರವನ್ನು ಕೇಂದ್ರ ಕಛೇರಿಗೆ ಸಲ್ಲಿಸುವ ಕುರಿತು.

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಈ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪರೀಕ್ಷಾವಧಿ ಘೋಷಣೆ ಮತ್ತು ಮುಂಬಡ್ತಿ ನೀಡಲು ತರಬೇತಿಯು ಕಡ್ಡಾಯವಾಗಿರುತ್ತದೆ. ತರಬೇತಿಯ ಪ್ರಮಾಣ ಪತ್ರಗಳ ಆಧಾರದ ಮೇಲೆ ಪರೀಕ್ಷಾವಧಿ ಘೋಷಣೆ ಮತ್ತು ಮುಂಬಡ್ತಿಗಳನ್ನು ನೀಡಲಾಗುತ್ತಿದೆ. ಗ್ರೂಪ್ 'ಸಿ' ಸಿಬ್ಬಂದಿಗಳಿಗೆ ಮುಂಬಡ್ತಿಗೆ ಮತ್ತು ಪರೀಕ್ಷಾ ಅವಧಿ ಘೋಷಿಸಲು ನಿಗದಿಪಡಿಸಿದ ಮಾಡ್ಯೂಲ್ 1, 2, 3 ಮತ್ತು 8, ಇ-ಗೌರ್ವನೆನ್ಸ್, ಪಂಚತಂತ್ರ ಹಾಗೂ ಎಂ.ಎಸ್.ಆಫೀಸ್ ತರಬೇತಿಗಳನ್ನು ಕಡ್ಡಾಯಗೊಳಿಸಲಾಗಿರುತ್ತದೆ.

ಅದರಂತೆ ಜೇಷ್ಠತಾ ಪಟ್ಟಿ 2021ನೇ ಸಾಲಿನ ಲೆಕ್ಕ ಸಹಾಯಕರ ನಮೂನೆ-1 ರಲ್ಲಿನ ಕ್ರ.ಸಂ.01 ರಿಂದ 451 ರವರೆಗೆ ಹಾಗೂ ಕಿರಿಯ ಲೆಕ್ಕ ಸಹಾಯಕರ ನಮೂನೆ-1 ರಲ್ಲಿನ ಕ್ರ.ಸಂ.01 ರಿಂದ 73 ರವರೆಗೆ ಮತ್ತು ಅನುಕಂಪ ಆಧಾರದ ಮೇಲೆ ನೇಮಕ ಹೊಂದಿರುವ ಸಿಬ್ಬಂದಿಗಳು ಸದರಿ ಹುದ್ದೆಗೆ ನಿಗದಿ ಪಡಿಸಲಾದ ತರಬೇತಿಗಳನ್ನು ಪಡೆದಿದ್ದಲ್ಲಿ ತರಬೇತಿ ಪ್ರಮಾಣ ಪತ್ರಗಳ ಸಾಫ್ಟ್ ಪ್ರತಿಯನ್ನು ಈ ಕಛೇರಿಯ ಇ-ಮೇಲ್ ಮುಖಾಂತರ ksaadtraining@gmail.comಗೆ ಕಳುಹಿಸಲು ಸೂಚಿಸಿದೆ.

ತರಬೇತಿ ಪಡೆಯದೆ ಇರುವ ಗ್ರೂಪ್ 'ಸಿ' ಸಿಬ್ಬಂದಿಗಳು ತಾವು ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ, ಇ-ಮೇಲ್ ಐಡಿಯ ಸಂಪೂರ್ಣ ವಿವರಗಳೊಂದಿಗೆ ಕೇಂದ್ರ ಕಛೇರಿಗೆ ದಿನಾಂಕ:30-12-2021 ರೊಳಗಾಗಿ ಬಾಕಿಯಿರುವ ಮಾಡ್ಯೂಲ್ ತರಬೇತಿಯ ಬಗ್ಗೆ ವಿವರಗಳನ್ನು ನೀಡಲು ಸೂಚಿಸಿದೆ. ನಿಗದಿ ಪಡಿಸಿದ ದಿನಾಂಕದೊಳಗೆ ಮಾಹಿತಿಯನ್ನು ನೀಡದ್ದಿದಲ್ಲಿ ತಮ್ಮನ್ನು ತರಬೇತಿಗೆ ನಿಯೋಜಿಸಲು ಸಾಧ್ಯವಾಗುವುದಿಲ್ಲ. ಅಂತಹ ಸಿಬ್ಬಂದಿಗಳಿಗೆ ಪರೀಕ್ಷಾವಧಿ ಘೋಷಣೆ ಮತ್ತು ಮುಂಬಡ್ತಿಗಳನ್ನು ತಡೆಹಿಡಿಯಲಾಗುವುದು. ಇದಕ್ಕೆ ಸಂಬಂಧಿಸಿದ ಸಿಬ್ಬಂದಿಗಳೇ ನೇರವಾಗಿ ಹೊಣೆಗಾರರಾಗಿರುತ್ತಾರೆ.

ಪ್ರಧಾನ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು.

ಪ್ರತಿಯನ್ನು:-

1. ಅಪರ ನಿರ್ದೇಶಕರು, ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು, ಬೆಳಗಾವಿ, ಮೈಸೂರು, ಕಲಬುರಗಿ.
2. ಎಲ್ಲಾ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗಳಿಗೆ ಮಾಹಿತಿಗಾಗಿ ಹಾಗೂ ತಮ್ಮ ಜಿಲ್ಲಾವ್ಯಾಪ್ತಿಯಡಿ ಬರುವ ಈ ಇಲಾಖೆಯ ಗ್ರೂಪ್'ಸಿ' ಸಿಬ್ಬಂದಿಗಳನ್ನು ಗುರುತಿಸಿ ಮಾಹಿತಿಯನ್ನು ಕ್ರೋಢೀಕರಿಸಿ ದಿನಾಂಕ:30-12-2021 ರೊಳಗೆ ನೀಡಲು ತಿಳಿಸಿದೆ.
3. ಕೇಂದ್ರ ಕಛೇರಿಯಲ್ಲಿನ ಸಿಬ್ಬಂದಿ ವರ್ಗ.
4. ಕಛೇರಿ ಪ್ರತಿ.

16/12/21